# ಬೆಂಗಳೂರು ಉತ್ತರ ವಿಶ್ವವಿದ್ಯಾಲಯ

ಟಮಕ, ಕೋಲಾರ–563 103.

ಸಂಖ್ಯೆ ಬೆಂ.ಉ.ವಿವಿ./ರಜೆ/ಆನ್‌ಲೈನ್ ತರಗತಿಗಳು/898/2019–20 ದಿನಾಂಕ: 02.04.2020

**<u>ಸುತ್ತೋಲೆ</u>**

ವಿಷಯ: ರಾಜ್ಯ ಸರ್ಕಾರವು ಕರೊನಾ ಸೋಂಕು ಸಂಬಂಧ ಏಪ್ರಿಲ್ 14 2020ರ ವರೆಗೆ ರಜೆ ವಿಸ್ತರಿಸಿರುವ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೋರ್ಸುಗಳ ವಿದ್ಯಾರ್ಥಿಗಳಿಗೆ ಆನ್ ಲೈನ್ ತರಗತಿಗಳ ಮೂಲಕ ಪಾಠಗಳ ಬೋಧನೆ/ ಸೆಮಿನಾರ್ ಪೇಪರ್‌ಗಳ ತಯಾರಿ, Project work/ determination ಗಳ ಸಿದ್ದತೆ ಇತ್ಯಾದಿ ಕಾರ್ಯ ಚಟುವಟಿಕೆಗಳನ್ನು ನಿರ್ವಹಿಸಿರುತ್ತಿರುವ ಬಗ್ಗೆ ಅಧ್ಯಾಪಕರು ವರಧಿ ನೀಡುವ ಸಂಭಂದ.

ಉಲ್ಲೇಖ: 1. ಪತ್ರ ಸಂಖ್ಯೆ: ಬೆಂ.ಉ.ವಿ. ಸುತ್ತೋಲೆ/897/2019–20
ದಿನಾಂಕ: 2303.2020
2. ಸರ್ಕಾರಿ ಪತ್ರ ಸಂಖ್ಯೆ: ಇಡಿ 139 ಯುಎನ್‌ಇ 2020 ದಿನಾಂಕ: 23.03.2020
3. ಬೆಂ.ಉ.ವಿವಿ ಸುತ್ತೋಲೆ ದಿನಾಂಕ: 27.03.2020

****

ಮೇಲಿನ ವಿಷಯ ಮತ್ತು ಉಲ್ಲೇಖಗಳಿಗೆ ಸಂಭಂದಿಸಿದಂತೆ ಮುಂದುವರೆದು ಮತ್ತೊಮ್ಮೆ ತಮ್ಮ ಗಮನವನ್ನು ಸಳೆಯುತ್ತಾ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ವಿವಿಧ ಸ್ನಾತಕೋತ್ತರ ಕೋರ್ಸುಗಳ Co-ordinators ಗಳು ಮತ್ತು ಅಧ್ಯಾಪಕರಿಗೆ ತಿಳಿಸುವುದೇನಂದರೆ ಕರೊನಾ ಸೋಂಕು ಸಂಬಂಧ ಸರ್ಕಾರ ರಜೆ ಘೋಷಿಸಿರುವ ಹಿನ್ನೆಲೆಯಲ್ಲಿ ಅಧ್ಯಾಪಕರು ವಿದ್ಯಾರ್ಥಿಗಳ ಶೈಕ್ಷಣಿಕ ಅನುಕೂಲದ ದೃಷ್ಟಿಯಿಂದ ಮತ್ತು ವಿದ್ಯಾರ್ಥಿಗಳು ರಜಾ ದಿನಗಳಲ್ಲಿ ಶೈಕ್ಷಣಿಕ ಕಾರ್ಯ ಚಟುವಟಿಗಳಲ್ಲಿ ತೊಡಗಿಸಿಗೊಂಡು, ರಚನಾತ್ಮಕವಾಗಿ ರಜೆ ಅವಧಿಯನ್ನು ಸದುಪಯೋಗ ಪಡೆದುಕೊಳ್ಳಬೇಕೆಂಬ ದೃಷ್ಟಿಯಿಂದ ತಪ್ಪದೆ ಅಧ್ಯಾಪಕರು ತಮ್ಮ ವ್ಯಾಪ್ತಿಯ ಪಠ್ಯಕ್ರಮಗಳಿಗೆ ಸಂಭಂದಿಸಿದಂತೆ Online, E-mail, WhatsApp ಇತ್ಯಾದಿ ಸಾಮಾಜಿಕ ಜಾಲತಾಣಗಳ ಸಹಾಯದಿಂದ ತರಗತಿ ಮತ್ತು ಸಂಪರ್ಕ ಕಾರ್ಯಕ್ರಮಗಳನ್ನು ನಡೆಸುವಂತೆ ಸೂಚಿಸಲಾಗಿತ್ತು.

ವಿವಿಧ ವಿಭಾಗಗಳ Co-ordinators ಗಳನ್ನು ಸಂಪರ್ಕಿಸಿ ವಿಚಾರಿಸಿದಾಗ ಆಯಾ ವಿಭಾಗದ ಎಲ್ಲಾ ಅಧ್ಯಾಪಕರು ವಿಶ್ವವಿದ್ಯಾಲಯದ ಆದೇಶದಲ್ಲಿ ತಿಳಿಸಿರುವಂತೆ Online, E-mail, WhatsApp ಮೂಲಕ ತರಗತಿಗಳನ್ನು ನಡೆಸುತ್ತಿರುವುದಾಗಿ ತಿಳಿಸಿರುತ್ತಾರೆ.

ರಾಜ್ಯ ಸರ್ಕಾರವು ಕರೊನಾ ಸೋಂಕು ಸಮಸ್ಯೆಗೆ ಸಂಭಂದಿರುವಂತೆ ಸಾರ್ವತ್ರಿಕ ರಜೆಯನ್ನು ಏಪ್ರಿಲ್ 14, 2020ರವರೆಗೆ ವಿಸ್ತರಿಸಿರುವದರಿಂದ ಮತ್ತೊಮ್ಮೆ ವಿವಿಧ ಸ್ನಾತಕೋತ್ತರ ವಿಭಾಗಗಳ ಅಧ್ಯಾಪಕರುಗಳಿಗೆ ತಿಳಿಸುವುದೇನಂದರೆ, ಈ ಹಿಂದೆ Online ತರಗತಿಗಳನ್ನು ನಡೆಸಲು ತಿಳಿಸಿರುವ ನಿರ್ದೇಶನ/ ಆದೇಶದಂತೆ ವಿಸ್ತರಣೆಯಾಗಿರುವ ರಜಾ ದಿನಗಳಲ್ಲಿಯು ತಪ್ಪದೆ ಕಾರ್ಯ ಸೂಚಿಯನ್ನು



Scanned by CamScanner

ರೂಪಿಸಿಕೊಂಡು ಈ ಮೂಲಕ ಪಠ್ಯಕ್ರಮಕ್ಕೆ ಪೂರಕವಾಗಿ ತರಗತಿಗಳನ್ನು ತಪ್ಪದೆ ನಡೆಸುವುದು. ರಾಜ್ಯ ಸರ್ಕಾರವು ರಜಾ ಅವಧಿಯನ್ನು ಕೆಲಸದ ದಿನಗಳ ಅವಧಿಯೆಂದು ಪರಿಗಣಿಸಲು ಸೂಚಿರುವ ಹಿನ್ನೆಲೆಯಲ್ಲಿ ಎಲ್ಲಾ ಅಧ್ಯಾಪಕರು ರಜಾ ದಿನಗಳ ಅವಧಿಯಲ್ಲಿ ತರಗತಿಗಳನ್ನು Online, E-mail, WhatsApp ಮೂಲಕ ನಡೆಸುವುದು ಮತ್ತು ವಿವಿದ ದಿನಾಂಕಗಳಲ್ಲಿ ನಡೆಸಿರುವ ತರಗತಿಗಳ ವಿವರ, ವಿದ್ಯಾರ್ಥಿಗಳ ಸಂಪರ್ಕದ ಸಂಖ್ಯೆ, ಉಪನ್ಯಾಸದ ವಿವಿರ (Online lecture content) ಇತ್ಯಾದಿಗಳ ಬಗ್ಗೆ ದಾಖಲಿಸಿಕೊಂಡು ದಿನಾಂಕ 15.04.2020 ರಂದು ವರದಿ ನೀಡುವುದು.

ವಿವಿದ ಸ್ನಾತಕೋತ್ತರ ಕೋರ್ಸುಗಳ Co-ordinators ಗಳು ಸದರಿ ಕಾರ್ಯಕ್ರಮಗಳ ಯಶಸ್ವಿಗೆ ಪೂರಕವಾದ ಸಲಹೆ ಮತ್ತು ಮಾರ್ಗ ಸೂಚಿಗಳನ್ನು ತಮ್ಮ ವಿಭಾಗಳ ಅಧ್ಯಾಪಕರ ಜೊತೆ ಚರ್ಚಿಸಿಕೊಂಡು ಆನ್‌ಲೈನ್ ತರಗತಿಗಳನ್ನು ಅನುಷ್ಠಾನಗೊಳಿಸಲು ತಪ್ಪದೆ ಕ್ರಮಕೈಗೊಂಡು ಅಂತಿಮ ವರದಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸುವುದು.

ಕುಲಸಚಿವರು(ಪ್ರ) 2/4/2020

ಕುಲಸಚಿವರು
ಬೆಂಗಳೂರು ಉತ್ತರ ವಿಶ್ವವಿದ್ಯಾಲಯ
ಟಮಕಾ, ಕೋಲಾರ, ಕರ್ನಾಟಕ-563 103.

ಪ್ರತಿಗಳು:

1. ಆಪ್ತ ಕಾರ್ಯದರ್ಶಿಗಳು, ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳ ಕಛೇರಿ, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು-560 001.
2. ಉಪ ಕಾರ್ಯದರ್ಶಿಗಳು, ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳ ಕಛೇರಿ, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು-560 001.
3. ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಮಂಗಸಂದ್ರ ಕೋಲಾರ
4. ಆಪ್ತ ಕಾರ್ಯದರ್ಶಿಗಳು, ಕುಲಪತಿಗಳ ಕಛೇರಿ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಕೋಲಾರ
5. ಆಪ್ತ ಸಹಾಯಕರು, ಕುಲಸಚಿವರ ಕಛೇರಿ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಕೋಲಾರ
6. ಆಪ್ತ ಸಹಾಯಕರು, ವಿತ್ತಾಧಿಕಾರಿಗಳು (ಪ್ರಭಾರ) ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಕೋಲಾರ
7. ಕಛೇರಿ ಪ್ರತಿ.



Scanned by CamScanner